ಐ.ಸಿ.ಎ.ಆರ್. – ಕೆ. ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ, ಗದಗ ಜಿಲ್ಲೆ

ರೈತರಿಗಾಗಿ ಹಾಗೂ ಕೃಷಿ ವಿಸ್ತರಣೆ ಸಿಬ್ಬಂದಿಗಾಗಿ

# ಕೃಷಿ ವಿಜ್ಞಾನ ಪತ್ರಿಕೆ

ಸಂಪುಟ–7 | ಅಕ್ಟೋಬರ್–ಡಿಸೆಂಬರ್, 2016 | ತ್ರೈಮಾಸಿಕ ಪತ್ರಿಕೆ | ಸಂಚಿಕೆ–3

## ಸಂಪಾದಕರ ನುಡಿ

ಈ ವರ್ಷ ಮತ್ತೆ ಜಿಲ್ಲೆಯ ಹಲವಾರು ಕಡೆ ಮುಂಗಾರಿನ ವೈಫಲ್ಯತೆಯಿಂದ ಕೃಷಿ ಉತ್ಪಾದನೆ ಕಡಿಮೆಯಾಗಿದೆ. ಇಂತಹ ಪರಸ್ಥಿತಿ ಎದುರಿಸಲು ರೈತರಲ್ಲಿ ಆತ್ಮಸ್ಥೈರ್ಯ ಹಾಗೂ ಮನೋಬಲ ಹೆಚ್ಚಾಗಲಿ ಎಂದು ಆಶಿಸುತ್ತಾ ಹಿಂಗಾರು ಮಳೆ ಆಶಾದಾಯಕವಾಗಲಿ ಎಂದು ಎಲ್ಲರೂ ಒಟ್ಟಾಗಿ ವರುಣ ದೇವರನ್ನು ಬರಮಾಡಿಕೊಳ್ಳೋಣ. ಹಿಂಗಾರು ಮಳೆ ಉತ್ತಮವಾಗಿ ಜಮೀನಿನ ತುಂಬೆಲ್ಲ ಫಸಲು ಬರುವಂತಾಗಲಿ ಎಂಬ ಆಶಯದೊಂದಿಗೆ ಹಿಂಗಾರಿನ ಬೆಳೆಗಳಾದ ಕಡಲೆ, ಜೋಳ, ಗೋಧಿ, ಕುಸುಬೆ ಹಾಗೂ ಮಾವಿನ ಬೆಳೆಗಳ ಕುರಿತ ಸಂಪೂರ್ಣ ಮಾಹಿತಿಯನ್ನು ಈ ಸಂಚಿಕೆಯಲ್ಲಿ ನೀಡಲಾಗಿದೆ. ಈ ಮಾಹಿತಿಯನ್ನು ರೈತ ಬಾಂಧವರೆಲ್ಲರೂ ಉಪಯೋಗಿಸಿಕೊಳ್ಳಬೇಕೆಂದು ಕೋರುತ್ತೇವೆ.

## ಕಡಲೆ ಬೆಳೆಯ ಪ್ರಮುಖ ಬೇಸಾಯ ಕ್ರಮಗಳು

**ತಳಿಗಳು:** ***ಅಣ್ಣಿಗೇರಿ–1:*** ಅಧಿಕ ಇಳುವರಿ ನೀಡುವ ಬರ ನಿರೋಧಕ ತಳಿ, ***ಜೆ.ಜಿ–11:*** ಸಿಡಿ ರೋಗ ನಿರೋಧಕ ಹಾಗೂ ದಪ್ಪಕಾಳಿನ ತಳಿ

***ಜಾಕಿ–9218:*** ಅಧಿಕ ಇಳುವರಿ ನೀಡುವ ಸಿಡಿರೋಗ ನಿರೋಧಕ ತಳಿ

**ಬಿತ್ತನೆ ಬೀಜ:** ಪ್ರತಿ ಎಕರೆಗೆ ಒಣ ಬೇಸಾಯದಲ್ಲಿ 20 ಕಿಲೋ ಹಾಗೂ ನೀರಾವರಿಯಲ್ಲಿ 25 ಕಿಲೋ ಬೀಜ ಬೇಕಾಗುತ್ತದೆ.

**ಬಿತ್ತನೆ ಕಾಲ:** ಅಕ್ಟೋಬರ್ ತಿಂಗಳದಿಂದ ನವೆಂಬರ್ ತಿಂಗಳದವರೆಗೆ ಬಿತ್ತನೆ ಮಾಡಬಹುದು.

**ಬೀಜೋಪಚಾರ:** ಪ್ರತಿ ಎಕರೆ ಬೀಜಕ್ಕೆ 100–125 ಗ್ರಾಂ ಟ್ರೈಕೊಡರ್ಮಾ ಬೀಜೋಪಚಾರ ಮಾಡಿ ನಂತರ 500 ಗ್ರಾಂ ರೈಜೋಬಿಯಂ ಜೈವಿಕ ಗೊಬ್ಬರದಿಂದ ಬೀಜೋಪಚಾರ ಮಾಡಿ ಬಿತ್ತನೆ ಮಾಡಬೇಕು. ಬಿತ್ತುವಾಗ ಹೊಲದ ಸುತ್ತಲೂ 4–6 ಸಾಲು ಜೋಳ ಬಿತ್ತನೆ ಮಾಡಬೇಕು.

**ರಾಸಾಯನಿಕ ಗೊಬ್ಬರ:** ಒಣ ಬೇಸಾಯದಲ್ಲಿ ಪ್ರತಿ ಎಕರೆಗೆ 25 ಕಿಲೋ ಡಿ.ಎ.ಪಿ ಹಾಗೂ ನೀರಾವರಿ ಪ್ರದೇಶದಲ್ಲಿ 50 ಕಿಲೋ ಡಿ.ಎ.ಪಿ ಗೊಬ್ಬರವನ್ನು ಹಾಕಬೇಕು.

**ಯೂರಿಯಾ ಗೊಬ್ಬರ ಸಿಂಪರಣೆ:** ಹೂವಾಡುವ ಹಂತದಲ್ಲಿ ಶೇ. 2 ರ ಯೂರಿಯಾ ಗೊಬ್ಬರವನ್ನು (20 ಗ್ರಾಂ ಯೂರಿಯಾ ಪ್ರತಿ ಲೀಟರ್ ನೀರಿಗೆ) ಸಿಂಪರಣೆ ಮಾಡುವುದರಿಂದ ಹೆಚ್ಚಿನ ಇಳುವರಿ ಪಡೆಯಬಹುದು. ಈ ಸಿಂಪರಣೆಯನ್ನು ಸಸ್ಯ ಸಂರಕ್ಷಣಾ ಕ್ರಮಗಳೊಂದಿಗೆ ಮಾಡಬಹುದು.

**ಕುಡಿ ಚಿವುಟುವುದು:** ಬಿತ್ತನೆ ಮಾಡಿದ 35 ರಿಂದ 40 ದಿನಗಳಲ್ಲಿ ಕುಡಿ ಚಿವುಟುವುದರಿಂದ ಹೆಚ್ಚಿನ ಇಳುವರಿ ಪಡೆಯಬಹುದು.

**ಪ್ಲಾನೊಫಿಕ್ಸ ಸಿಂಪರಣೆ:** ಬಿತ್ತಿದ 35 ದಿನಗಳ ನಂತರ 0.25 ಮಿ.ಲೀ ಪ್ಲಾನೋಫಿಕ್ಸ್ ಪ್ರತಿ ಲೀಟರ್ ನೀರಿಗೆ ಹಾಕಿ ಸಿಂಪರಣೆ ಮಾಡಬೇಕು. ಇದರಿಂದ ಬೆಳೆಯು ಆರೋಗ್ಯವಾಗಿ ಬೆಳೆದು ಹೆಚ್ಚು ಇಳುವರಿ ಕೊಡುತ್ತದೆ.

**ನೀರಾವರಿ:** ಬಿತ್ತಿದ 45 ದಿನಗಳಲ್ಲಿ ಅಂದರೆ ಹೂ ಬಿಡುವಾಗ ಹಾಗೂ ಬಿತ್ತಿದ 75 ದಿನಗಳಲ್ಲಿ ಅಂದರೆ ಕಾಳು ಕಟ್ಟುವಾಗ ನೀರು ಹಾಯಿಸಬೇಕು.

**ಅಂತರ ಬೆಳೆ :** ಅಂತರ ಬೆಳೆಯಾಗಿ ಐದು ಸಾಲು ಕಡಲೆ ಮತ್ತು ಒಂದು ಸಾಲು ಕುಸುಬೆ ಅಥವಾ ಜೋಳದ ಬೆಳೆಯನ್ನು ಬೆಳೆಯುವುದು ಲಾಭದಾಯಕ.

## ಕಡಲೆ ಬೆಳೆಯಲ್ಲಿ ಸಮಗ್ರ ಕೀಟ ನಿರ್ವಹಣೆ

ಕಡಲೆ ಬೆಳೆ ಬಿತ್ತಿದ 6 ರಿಂದ 8 ದಿನಗಳಲ್ಲಿ ಬೀಜಗಳು ಮೊಳಕೆ ಒಡೆದು ಬೆಳೆ ಕಾಣಿಸುವುದು. ಈ ಸಮಯದಲ್ಲಿ ಭೂಮಿಯಲ್ಲಿಯೇ ಇರುವ ಕಡಲೆ ಕೀಡೆಯ ಕೋಶಗಳು ಪತಂಗಗಳಾಗಿ ಹೊರ ಬಂದು ಕಡಲೆ ಬೆಳೆಯ ಎಳೆಯ ಎಲೆಗಳ ಮೇಲೆ ಒಂದೊಂದಾಗಿ ತತ್ತಿಗಳನ್ನು ಅಂಟಿಸುತ್ತವೆ. ಒಂದು ಹೆಣ್ಣು ಪತಂಗವು 300 ರಿಂದ 350 ತತ್ತಿಗಳನ್ನು ಇಡುತ್ತವೆ. ಸೂಕ್ತ ಹವಾಮಾನ ಸಂದರ್ಭದಲ್ಲಿ 3 ರಿಂದ 4 ದಿನಗಳಲ್ಲಿ, ತತ್ತಿಗಳು ಮರಿಗಳಾಗಿ ಎಲೆಗಳನ್ನು ಕೆರೆದು ತಿನ್ನುತ್ತವೆ. ಈ ಕೀಟದ ಮರಿಗಳನ್ನು 5 ದಿನದ ಒಳಗಾಗಿ ಹತೋಟಿ ಮಾಡಿದರೆ ಸುಮಾರು 95% ರಷ್ಟು ಕೀಟಬಾಧೆಯನ್ನು ಹತೋಟಿ ಮಾಡಬಹುದು. ಈ ಸಮಯದಲ್ಲಿ ಹತೋಟಿ ಮಾಡದಿದ್ದರೆ ಕೀಟಗಳ ಹಾನಿಗೆ ತುತ್ತಾಗಿ ಬೆಳೆಯ ಇಳುವರಿ ಕಡಿಮೆಯಾಗುತ್ತದೆ. ಕೀಟಗಳ ಹಾನಿಯನ್ನು ತಡೆಯಲು ಈ ಕೆಳಗೆ ತಿಳಿಸಿದ ಸಮಗ್ರ ಕೀಟ ನಿರ್ವಹಣೆ ಕ್ರಮಗಳನ್ನು ಅನುಸರಿಸಬೇಕು.

- ಕಡಲೆ ಬೆಳೆಯ ಸುತ್ತ ಎರಡು ತಿರುವು ಹಿಂಗಾರು ಜೋಳದ ಬೆಳೆ ಬಿತ್ತಬೇಕು.
- ಪಕ್ಷಿಗಳನ್ನು ಆಕರ್ಷಿಸಲು ಪ್ರತಿ ಎಕರೆಗೆ 4 ಅಕ್ಕಲಕಟ್ಟಿಗೆ ನಿಲ್ಲಿಸಬೇಕು.
- ಕಡಲೆ ಬೆಳೆಯಲ್ಲಿ ಜೋಳ ಹಾಗೂ ಸೂರ್ಯಕಾಂತಿ ಬೀಜಗಳನ್ನು ಪ್ರತಿ ಎಕರೆಗೆ 20 ಗ್ರಾಂ ನಂತೆ ಕೂಡಿಸಿ ಬಿತ್ತಬೇಕು.
- ಪಕ್ಷಿಗಳನ್ನು ಆಕರ್ಷಿಸಲು ಕಡಲೆ ಬೆಳೆಯ ಹೊಲದಲ್ಲಿ ಮಣ್ಣಿನ ಕುಡಿಕೆಯಲ್ಲಿ ನೀರಿನ ವ್ಯವಸ್ಥೆ ಮಾಡಬೇಕು. 10-15 ದಿನಗಳಗೊಮ್ಮೆ ಪ್ರತಿ ಎಕರೆಗೆ ಒಂದು ಕಿಲೋ ಚುರುಮರಿ ಉಗ್ಗಬೇಕು (ಕೀಟನಾಶಕ ಉಪಚಾರ ಮಾಡುವದಕ್ಕಿಂತ 5 ದಿನಗಳ ಮೊದಲು ಅಥವಾ 5 ದಿನಗಳ ನಂತರ)
- ಕಡಲೆ ಬಿತ್ತಿದ 10 ರಿಂದ 15 ದಿನಗಳ ಒಳಗಾಗಿ ಪ್ರತಿ ಎಕರೆಗೆ ಮೂರು ಮೋಹಕ ಬಲೆಗಳನ್ನು ಅಳವಡಿಸುವುದು ಮತ್ತು ಪ್ರತಿ 15 ರಿಂದ 20 ದಿನಗಳ ಅಂತರದಲ್ಲಿ ಲಿಂಗಾಕರ್ಷಕ ವಸ್ತುಗಳನ್ನು ಬದಲಿಸಬೇಕು.
- ಬಿತ್ತಿದ 15 ರಿಂದ 20 ದಿನಗಳಲ್ಲಿ ಪ್ರೊಪೇನೊಫಾಸ್ 30 ಮಿ.ಲೀ ಮತ್ತು ಎಸಿಪೇಟ್ 10 ಗ್ರಾಂ ಪ್ರತಿ 15 ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.
- ಬಿತ್ತಿದ 30 ರಿಂದ 35 ದಿನಕ್ಕೆ 6 ಮಿ.ಲೀ ಇಂಡಾಕ್ಸಿಕಾರ್ಬ ಅಥವಾ 6 ಗ್ರಾಂ ಇಮಾಮೆಕ್ಟಿನ್ ಬೆಂಜೋಯೇಟ್ ಮತ್ತು 200 ಗ್ರಾಂ ಯೂರಿಯಾವನ್ನು ಪ್ರತಿ 15 ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.
- ಬಿತ್ತಿದ 45 ರಿಂದ 50 ದಿನದಲ್ಲಿ 2 ಮಿ.ಲೀ ಪ್ಲೂಬೆಂಡಿಮೈಡ್ ಅಥವಾ ಸ್ಪೈನೊಸೈಡ್ 6 ಮಿ.ಲೀ ಮತ್ತು 200 ಗ್ರಾಂ ಯೂರಿಯಾವನ್ನು ಪ್ರತಿ 15 ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.
- ಬಿತ್ತಿದ 60-65 ದಿನದಲ್ಲಿ 3 ಮಿ.ಲೀ ರೇನಾಕ್ಷಿಫಾಯರ್ ಔಷಧಿಯನ್ನು ಪ್ರತಿ 15 ಲೀಟರ ನೀರಿನ ಒಂದು ಟ್ಯಾಂಕಿಗೆ ಕೂಡಿಸಿ ಸಿಂಪರಣೆ ಮಾಡಬೇಕು.

### ರೋಗಗಳ ನಿರ್ವಹಣೆ:

**ಸಿಡಿರೋಗ:** ಈ ರೋಗವು ಬೆಳೆ ಮೊಳಕೆಯಿಂದ ಪ್ರಾರಂಭವಾಗಿ ಬೆಳೆ ಮಾಗುವರೆಗೂ ಗಿಡಗಳು ಸೊರಗಿ ಸಾಯುತ್ತವೆ. ಈ ರೋಗದ ಬಾಧೆಯಿಂದ ಗಿಡಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿ ಇಳುವರಿಯೂ ಕೂಡಾ ಕಡಿಮೆಯಾಗತ್ತದೆ.

**ಬೀಜೋಪಚಾರ:** ಬಿತ್ತುವ ಪೂರ್ವದಲ್ಲಿ ಟ್ರೈಕೊಡರ್ಮಾ 10 ಗ್ರಾಂ ಅಥವಾ ಕಾರ್ಬಕ್ಸಿನ್ 3 ಗ್ರಾಂ ಪ್ರತಿ ಕಿಲೋ ಬೀಜಕ್ಕೆ ಲೇಪಿಸಿ ಬಿತ್ತಬೇಕು.

**ಮಣ್ಣಿಗೆ ಉಪಚಾರ:** 1 ಕಿಲೋ ಟ್ರೈಕೊಡರ್ಮಾ, 50 ಕಿಲೋ ಬೇವಿನಹಿಂಡಿ ಮತ್ತು 100 ಕಿಲೋ ಶಗಣಿ ಗೊಬ್ಬರದ ಇವು ಎಲ್ಲವೂಗಳನ್ನು ಕೂಡಿಸಿ 4 ರಿಂದ 5 ದಿನ ನೀರಿನಿಂದ ಹದ ಮಾಡಿ ಬಿತ್ತುವ ಪೂರ್ವದಲ್ಲಿ ಮಣ್ಣಿಗೆ ಸೇರಿಸಬೇಕು.

**ತುಕ್ಕು ರೋಗ:** ಈ ರೋಗವು ಕಡಲೆ ಬೆಳೆಯನ್ನು ತಡವಾಗಿ ಅಂದರೆ ನವೆಂಬರ್ 15ರ ನಂತರ ನೀರಾವರಿ ಪ್ರದೇಶದಲ್ಲಿ ಬಿತ್ತಿದರೆ ಕಾಣಿಸುತ್ತದೆ. ಕಂದು ಬಣ್ಣದ ಮಚ್ಚೆಗಳು ಮೊದಲು ಬೆಳೆಯ ತುದಿ ಎಲೆಗಳಲ್ಲಿ ಕಂಡು ಬರುತ್ತದೆ. ಮಣ್ಣಿನಲ್ಲಿ ತೇವಾಂಶ ಮತ್ತು ವಾತಾವರಣದಲ್ಲಿ ಆದ್ರತೆ ಹೆಚ್ಚಾಗಿದ್ದರೆ ಬೆಳೆ ಈ ರೋಗಕ್ಕೆ ತುತ್ತಾಗುತ್ತದೆ.

**ನಿರ್ವಹಣೆ:** ತುದಿ ಎಲೆಗಳಲ್ಲಿ ಕಂದು ಬಣ್ಣದ ಮಚ್ಚೆಗಳು ಕಂಡ ತಕ್ಷಣ 15 ಮಿ.ಲೀ ಪ್ರೊಪಿಕೋನಾಜೋಲ್ ಔಷಧಿಯನ್ನು 15 ಲೀಟರ್ ನೀರಿಗೆ ಕೂಡಿಸಿ ಸಿಮಪರಣೆ ಮಾಡಬೇಕು.

## ಹಿಂಗಾರಿ ಜೋಳದ ಬೆಳೆಯ ಸುಧಾರಿತ ಬೇಸಾಯ ಕ್ರಮಗಳು

ಗದಗ ಜಿಲ್ಲೆಯಲ್ಲಿ ಹಿಂಗಾರಿ ಜೋಳವು ಒಂದು ಪ್ರಮುಖ ಆಹಾರ ಮತ್ತು ಮೇವಿನ ಬೆಳೆಯಾಗಿದ್ದು, 2015-16 ನೇ ಸಾಲಿನಲ್ಲಿ ಜಿಲ್ಲೆಯ ಅಂದಾಜು 45000 ಹೆಕ್ಟೇರ್ ಪ್ರದೇಶದಲ್ಲಿ ಇದನ್ನು ಬೆಳೆಯಲಾಗಿದೆ. ಗದಗ ಜಿಲ್ಲೆಯಲ್ಲಿ ಶೇಕಡಾ 85 ರಷ್ಟು ಪ್ರದೇಶವು ಒಣಬೇಸಾಯ ಜಮೀನನ್ನು ಹೊಂದಿದ್ದು, ಇತ್ತೀಚಿನ ವರ್ಷಗಳಲ್ಲಿ ಹವಾಮಾನದ ವೈಪರೀತ್ಯದಿಂದ ಹಿಂಗಾರಿ ಜೋಳದ ಬೆಳೆಯ ಇಳುವರಿ ಕಡಿಮೆಯಾಗುತ್ತಿದೆ. ಕಡಿಮೆ ಇಳುವರಿಗೆ ಇನ್ನಿತರ ಪ್ರಮುಖ ಕಾರಣಗಳೆಂದರೆ ಮಣ್ಣಿನ ತೇವಾಂಶದ ಕೊರತೆ, ಸ್ಥಳೀಯ ತಳಗಳ ಕಡಿಮೆ ಉತ್ಪಾದಕತೆ ಹಾಗೂ ಮಣ್ಣಿನ ಕಡಿಮೆ ಫಲವತ್ತತೆ. ನಮ್ಮ ಜಿಲ್ಲೆಗೆ ಹೊಂದುವ ಹಲವಾರು ಹೊಸ ತಳಗಳು ಬಿಡುಗಡೆಯಾಗಿದ್ದು, ಇವು ಸ್ಥಳೀಯವಾಗಿ ಬೆಳೆಯುವ ಮಾಲದಂಡಿ ತಳಗಿಂತ ಹೆಚ್ಚು ಇಳುವರಿ ಕೊಡುತ್ತವೆ.

***ತಳಗಳು***

- **ಎಸ್.ಪಿ.ವಿ-2217 :** ಈ ತಳಯು ಧಾರವಾಡ ಕೃಷಿ ವಿಶ್ವವಿದ್ಯಾಲಯದಿಂದ ಬಿಡುಗಡೆಯಾಗಿರುತ್ತದೆ. ಇದು ಮಾಲದಂಡಿ ತಳಗಿಂತ ಶೇಕಡಾ 15-20 ರಷ್ಟು ಹೆಚ್ಚು ಕಾಳಿನ ಇಳುವರಿ ಕೊಡುತ್ತದೆ ಹಾಗೂ ಉತ್ತಮ ಗುಣಮಟ್ಟದ ಮೇವಿನ ಗುಣಧರ್ಮ ಹೊಂದಿರುತ್ತದೆ. ಇದ್ದಲು ಕಾಂಡ ಕೊಳೆ ರೋಗ ತಡೆದುಕೊಳ್ಳುವ ಶಕ್ತಿಯನ್ನು ಹೊಂದಿದ್ದು, ಮಾಗುವ ಸಮಯದಲ್ಲಿ ಬೆಳೆ ನೆಲಕ್ಕೆ ಬೀಳುವುದಿಲ್ಲ. ಈ ತಳಯ ಕಾಳುಗಳು ದಪ್ಪ ಹಾಗೂ ದುಂಡಾಗಿ ಇದ್ದು, ಮಾಗುವ ಸಮಯದಲ್ಲೂ ಕೂಡ ಹಸಿರಾದ ಎಲೆಗಳನ್ನು ಹೊಂದಿರುತ್ತದೆ.
- **ಸಿ.ಎಸ್.ವಿ-22 :** ಈ ತಳಯು ಆಳವಾದ ಕಪ್ಪು ಮಣ್ಣಿಗೆ ಸೂಕ್ತವಾಗಿದ್ದು, ಸ್ಥಳೀಯ ಮಾಲದಂಡಿ ತಳಗಿಂತ ಶೇಕಡಾ 10-15 ರಷ್ಟು ಹೆಚ್ಚು ಕಾಳಿನ ಇಳುವರಿ ಕೊಡುತ್ತದೆ.
- **ಮಾಲದಂಡಿ (ಎಮ್ 35-1)** : ಸಾಂಪ್ರದಾಯಕವಾಗಿ ಹಲವಾರು ದಶಕಗಳಿಂದ ಸ್ಥಳೀಯವಾಗಿ ಮಾಲದಂಡಿ ತಳಯನ್ನು ರೈತರು ಬೆಳೆಯುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಇಳುವರಿ ಮಟ್ಟ ಸ್ವಲ್ಪ ಕಡಿಮೆಯಾಗಿದೆ.

***ಬೀಜೋಪಚಾರ***

ಪ್ರತಿ ಏಕರೆಗೆ ಬಿತ್ತಬೇಕಾದ 3 ಕಿಲೋ ಬೀಜವನ್ನು 4.5 ಲೀಟರ್ ನೀರಿನಲ್ಲಿ 90 ಗ್ರಾಂ ಕ್ಯಾಲ್ಸಿಯಂ ಕ್ಲೋರೈಡ್‌ನ್ನು ಕರಗಿಸಿ ತಯಾರಿಸಿದ ದ್ರಾವಣದಲ್ಲಿ 6-8 ಘಂಟೆಗಳವರೆಗೆ ನೆನೆಸಿ, ನಂತರ ನೆರಳಿನಲ್ಲಿ ಒಣಗಿಸಿ 20 ಗ್ರಾಂ ಗಂಧಕದ ಪುಡಿಯಿಂದ ಬೀಜೋಪಚಾರ ಮಾಡಿ ಬಿತ್ತಬೇಕು. ಕ್ಯಾಲ್ಸಿಯಂಕ್ಲೋರೈಡ್ ದ್ರಾವಣದಲ್ಲಿ ನೆನೆಸಿ ಬಿತ್ತನೆ ಮಾಡುವದರಿಂದ ಬೆಳೆಗೆ ಬರ ನಿರೋಧಕ ಶಕ್ತಿ ಹೆಚ್ಚುತ್ತದೆ ಹಾಗೂ ಗಂಧಕದ ಪುಡಿಯಿಂದ ಬೀಜೋಪಚಾರ ಮಾಡುವದರಿಂದ ಬೆಳೆಗೆ ಬರುವ ಕಾಡಿಗೆ ರೋಗವನ್ನು ನಿಯಂತ್ರಣ ಮಾಡಬಹುದು.

***ಬಿತ್ತನೆ ಕಾಲ***

ಸೆಪ್ಟೆಂಬರ್ 15 ರಿಂದ ಅಕ್ಟೋಬರ 15 ರೊಳಗೆ ಪ್ರತಿ ಎಕರೆಗೆ 3 ಕಿಲೋ ಬೀಜ ಬಳಸಿ 18 ಇಂಚು (ಒಂದೂವರೆ ಅಡಿ) . ಸಾಲಿನಲ್ಲಿ ಬಿತ್ತನೆ ಮಾಡಬೇಕು.

***ಗೊಬ್ಬರ***

- ಬಿತ್ತನೆ ಸಮಯದಲ್ಲಿ ಪ್ರತಿ ಎಕರೆಗೆ 25 ಕಿಲೋ ಯೂರಿಯಾ ಮತ್ತು 25 ಕಿಲೋ ಡಿ.ಎ.ಪಿ ರಸಗೊಬ್ಬರವನ್ನು ಹಾಕಬೇಕು
- ಪ್ರತಿ ಎಕರೆಗೆ 6 ಕಿಲೋ ಸತುವಿನ ಸಲ್ಫೇಟನ್ನು ಕೊಟ್ಟಿಗೆ ಗೊಬ್ಬರದ ಜೊತೆಗೆ ಸೇರಿಸಿ ಮಣ್ಣಿಗೆ ಬೆರಸಬೇಕು

***ಅಂತರ ಬೇಸಾಯ***

ಬಿತ್ತಿದ 20 ರಿಂದ 25 ದಿವಸಗಳಲ್ಲಿ ಸೈಕಲ್ ವ್ಹೀಡರ್‌ದಿಂದ ಎಡೆಕುಂಟೆ ಹೊಡೆಯಬೇಕು. ಮೇಲಿಂದ ಮೇಲೆ ಸೈಕಲ್ ವ್ಹೀಡರ್‌ದಿಂದ ಎಡೆಕುಂಟೆ ಹೊಡೆಯುವದರಿಂದ ಕಪ್ಪು ಮಣ್ಣಿನಲ್ಲಿ ಬಿಡುವ ಎರಕಲು ಬೀಡನ್ನು ತಪ್ಪಿಸಬಹುದು ಹಾಗೂ ಬೆಳೆಗೆ ಆಗುವ ಹಸಿ ಕೊರತೆಯನ್ನು ತಡೆಗಟ್ಟಬಹುದು.

## ಒಣಬೇಸಾಯದಲ್ಲಿ ಗೋಧಿ ಬೆಳೆಯುವಾಗ ಅನುಸರಿಸಬೇಕಾದ ಕ್ರಮಗಳು

**ತಳಗಳು :** ಬಿಜಗಾ ಹಳದಿ, ಕಿರಣ ಮತ್ತು ಧಾರವಾಡ-2006 **ಬೀಜ:** ಪ್ರತಿ ಎಕರೆಗೆ 20 ಕಿಲೋ

**ಬೀಜೋಪಚಾರ:** ಪ್ರತಿ ಎಕರೆಗೆ ಬಿತ್ತುವ ಬೀಜವನ್ನು 40 ಗ್ರಾಂ ಕಾರ್ಬೆಂಡೈಜಿಮ್ ಶಿಲೀಂಧ್ರನಾಶಕದಿಂದ ಬೀಜೋಪಚಾರ ಮಾಡಬೇಕು.

**ಬಿತ್ತನೆ ಕಾಲ:** ಅಕ್ಟೋಬರ್ ಮೊದಲನೇ ವಾರದಿಂದ ಅಕ್ಟೋಬರ್ ಎರಡನೇ ವಾರದವರೆಗೆ ಬಿತ್ತನೆ ಮಾಡಬೇಕು.

**ಜೈವಿಕ ಗೊಬ್ಬರ:** ಪ್ರತಿ ಎಕರೆಗೆ 400 ಗ್ರಾಂ ಅಜೊಸ್ಪಿರಿಲಮ್‌ನ್ನು ಬಿತ್ತುವ ಬೀಜಕ್ಕೆ ಲೇಪನ ಮಾಡಿ ಬಿತ್ತಬೇಕು.

**ರಾಸಾಯನಿಕ ಗೊಬ್ಬರ:** ಪ್ರತಿ ಎಕರೆಗೆ ಶಿಫಾರಸು ಮಾಡಿದ ರಾಸಾಯನಿಕ ಗೊಬ್ಬರದ ಪ್ರಮಾಣ 20 ಕಿಲೋ ಸಾರಜನಕ ಹಾಗೂ 10 ಕಿಲೋ ರಂಜಕ ಇರುತ್ತದೆ. ಅಂದರೆ ಪ್ರತಿ ಎಕರೆಗೆ ಸುಮಾರು 22 ಕಿಲೋ ಡಿ.ಎ.ಪಿ ಮತ್ತು 35 ಕಿಲೋ ಯೂರಿಯಾ ಹಾಕಬೇಕು.

## ನೀರಾವರಿಯಲ್ಲಿ ಗೋಧಿ ಬೆಳೆಯುವಾಗ ಅನುಸರಿಸಬೇಕಾದ ಕ್ರಮಗಳು

**ತಳಗಳು :** ಚಪಾತಿ ಮಾಡಲು ಯೋಗ್ಯ ತಳಗಳು: ಡಿ.ಡಬ್ಲ್ಯೂ.ಆರ್-162, ಡಿ.ಡಬ್ಲ್ಯೂ.ಆರ್-225 ಹಾಗೂ ಯು.ಎ.ಎಸ್-304

ರವಾ ಮಾಡಲು ಯೋಗ್ಯ ತಳಗಳು: ಡಿ.ಡಬ್ಲ್ಯೂ.ಆರ್-1006, ಡಿ.ಡಬ್ಲ್ಯೂ.ಆರ್-415, ಹಾಗೂ ಯು.ಎ.ಎಸ್.-428

**ಬೀಜ :** ಪ್ರತಿ ಎಕರೆಗೆ 60 ಕಿಲೋ ಬೀಜ ಬಿತ್ತನೆ ಮಾಡಬೇಕು.

**ಬೀಜೋಪಚಾರ :** ಪ್ರತಿ ಎಕರೆಗೆ ಬಳಸುವ ಬಿತ್ತನೆ ಬೀಜಗಳನ್ನು 120 ಗ್ರಾಂ ಕಾರ್ಬೆಂಡೈಜಿಮ್ ಶಿಲೀಂಧ್ರನಾಶಕದಿಂದ ಬೀಜೋಪಚಾರ ಮಾಡಬೇಕು.

**ಬಿತ್ತನೆ ಕಾಲ :** ಅಕ್ಟೋಬರ್ 15 ರಿಂದ ನವೆಂಬರ್ 15 ರ ವರೆಗೆ ಬಿತ್ತನೆ ಮಾಡಬೇಕು.

**ಜೈವಿಕ ಗೊಬ್ಬರ :** ಒಂದು ಕಿಲೋ ಅಜೊಸ್ಪಿರಿಲಮ್‌ನ್ನು ಒಂದು ಎಕರೆಗೆ ಬೇಕಾದ 60 ಕಿಲೋ ಬೀಜದೊಂದಿಗೆ ಉಪಚರಿಸಿ ಬಿತ್ತಬೇಕು.

**ರಾಸಾಯನಿಕ ಗೊಬ್ಬರ :** ಪ್ರತಿ ಎಕರೆಗೆ ಶಿಫಾರಸು ಮಾಡಿದ ರಾಸಾಯನಿಕ ಗೊಬ್ಬರದ ಪ್ರಮಾಣ 40 ಕಿಲೋ ಸಾರಜನಕ, 30 ಕಿಲೋ ರಂಜಕ ಹಾಗೂ 20 ಕಿಲೋ ಪೊಟ್ಯಾಷ್ ಇರುತ್ತದೆ. ಅಂದರೆ ಬಿತ್ತುವಾಗ 65 ಕಿಲೋ ಡಿ.ಎ.ಪಿ, 18 ಕಿಲೋ ಯೂರಿಯಾ ಮತ್ತು 33 ಕಿಲೋ ಪೊಟ್ಯಾಷ್ ಹಾಕಬೇಕು. ಬಿತ್ತನೆಯಾದ 30 ದಿನಗಳ ನಂತರ 43 ಕಿಲೋ ಯೂರಿಯಾವನ್ನು ಮೇಲು ಗೊಬ್ಬರವಾಗಿ ಕೊಡಬೇಕು.

### *ಗೋಧಿ ಬೆಳೆ ಬಾಧಿಸುವ ರೋಗಗಳು ಮತ್ತು ಕೀಟಗಳು*

- **ಸಿಡಿರೋಗ:** ಸಿಡಿರೋಗ ಬರದಂತೆ ಗೋಧಿ ಬಿತ್ತುವ ಪೂರ್ವದಲ್ಲಿ ಟ್ರೈಕೋಡರ್ಮಾ 10 ಗ್ರಾಂ ಅಥವಾ ಕಾರ್ಬಾಕ್ಸಿನ್ 1 ಗ್ರಾಂ ಪ್ರತಿ ಕಿಲೋ ಬೀಜಕ್ಕೆ ಕೂಡಿಸಿ ಬೀಜೋಪಚಾರ ಮಾಡಿರಿ.
- **ಭಂಡಾರ ರೋಗ:** ಈ ರೋಗ ಕಾಣಿಸಿದ ತಕ್ಷಣ ಪ್ರೊಪಿಕೊನೋಜೋಲ್ 15 ಮಿ.ಲೀ ಅಥವಾ ಕಾರ್ಬಂಡೈಜಿಮ್ 15 ಗ್ರಾಂ ಪ್ರತಿ 15 ಲೀಟರ್ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ
- **ಕಾಂಡಕೊರೆಯುವ ಕೀಟ:** ಈ ಕೀಟದ ಬಾಧೆ ಕಾಣಿಸಿದ ತಕ್ಷಣ ಮೊನೊಕ್ರೊಟೊಫಾಸ್ 25 ಮಿ.ಲೀ ಅಥವಾ ಕಾರ್ಬೋಸಲ್ಫಾನ್ 30 ಮಿ.ಲೀ ಮತ್ತು ಡಿಡಿವಿಪಿ 15 ಮಿ.ಲೀ ಪ್ರತಿ 15 ಲೀಟರ್ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ

## ಬೆಳೆ : ಕುಸುಬೆ

- **ತಳಗಳು** : ಅಣ್ಣಿಗೇರಿ-1, ಅಣ್ಣಿಗೇರಿ-300 ಹಾಗೂ ಅಣ್ಣಿಗೇರಿ-2 **ಬೀಜ:** ಪ್ರತಿ ಎಕರೆಗೆ 3 ಕಿಲೋ
- **ಬಿತ್ತನೆ ಕಾಲ** : ಸೆಪ್ಟೆಂಬರ್ 15 ರಿಂದ ಅಕ್ಟೋಬರ್ 15 ರ ವರೆಗೆ ಬಿತ್ತನೆ ಮಾಡಬಹುದು.
- **ಸಾಲಿನ ಅಂತರ** : ಸಾಲಿನಿಂದ ಸಾಲಿಗೆ 2 ಅಡಿ ಹಾಗೂ ಗಿಡದಿಂದ ಗಿಡಕ್ಕೆ 1 ಅಡಿ ಇರುವಂತೆ ಬಿತ್ತನೆ ಮಾಡಬೇಕು.
- **ಬೀಜೋಪಚಾರ:** ಪ್ರತಿ ಎಕರೆಗೆ ಬೇಕಾಗುವ 3 ಕಿಲೋ ಬೀಜದ ಜೊತೆಗೆ 10 ಗ್ರಾಂ ಇಮಿಡಾಕ್ಲೊಪ್ರಿಡ್ ಕೀಟನಾಶಕದಿಂದ ಬೀಜೋಪಚಾರ ಮಾಡಿ ಬಿತ್ತನೆ ಮಾಡುವದರಿಂದ ರಸ ಹೀರುವ ಕೀಟದ ಬಾಧೆಯನ್ನು ಸುಮಾರು 40-45 ದಿವಸಗಳ ವರೆಗೆ ಹತೋಟಿ ಮಾಡಬಹುದು.

- **ರಾಸಾಯನಿಕ ಗೊಬ್ಬರ :** ಪ್ರತಿ ಎಕರೆಗೆ ಶಿಫಾರಸು ಮಾಡಿದ ರಾಸಾಯನಿಕ ಗೊಬ್ಬರದ ಪ್ರಮಾಣ 16-16-5 ಕಿಲೋ ಸಾರಜನಕ, ರಂಜಕ, ಪೊಟ್ಯಾಷ್ ಹಾಗೂ 12 ಕಿಲೋ ಗಂಧಕ ಕೊಡಬೇಕು. ಅಂದರೆ 35 ಕಿಲೋ ಡಿ.ಎ.ಪಿ, 22 ಕಿಲೋ ಯೂರಿಯಾ, 8 ಕಿಲೋ ಪೊಟ್ಯಾಷ್ ಮತ್ತು 100 ಕಿಲೋ ಜಿಪ್ಸಂ ಹಾಕಬೇಕು.

### *ಕುಸುಬೆ, ಬೆಳೆ ಬಾಧಿಸುವ ರೋಗಗಳು ಮತ್ತು ಕೀಟಗಳು ಹಾಗೂ ಅವುಗಳ ನಿಯಂತ್ರಣ*

- **ರಸ ಹೀರುವ ಕೀಟಗಳು :** ಕಪ್ಪು ಶೀರು ಹತೋಟಿ ಮಾಡಲು 2 ಮಿ.ಲೀ ಡೈಮಿಥೋಯೇಟ್ ಅಥವಾ 0.3 ಮಿ.ಲೀ ಇಮಿಡಾಕ್ಲೊಪ್ರಿಡ್ ಸಿಂಪರಣೆ ಮಾಡಿರಿ
- **ಹಸಿರು ಕೀಡೆ :** ಈ ಕೀಡೆ ಹತೋಟಿ ಮಾಡಲು 3 ಮಿ.ಲೀ ಪ್ರೊಪೇನೊಫಾಸ್ ಅಥವಾ 0.3 ಮಿ.ಲೀ ಇಂಡಾಕ್ಸಿಕಾರ್ಬ ಔಷಧಿಯನ್ನು ಪ್ರತಿ ಲೀಟರ್ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ.
- **ಎಲೆ ಚುಕ್ಕೆ ರೋಗ :** ಎಲೆ ಚುಕ್ಕೆ ರೋಗ ಹತೋಟಿ ಮಾಡಲು 1 ಗ್ರಾಂ ಕಾರ್ಬೆಂಡೈಜಿಮ್ ಅಥವಾ 1 ಮಿ.ಲೀ ಪ್ರೊಪಿಕೊನೋಜೋಲ್ ಔಷಧಿಯನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ.
  **ಸೂಚನೆ** : ಔಷಧಿಗಳೊಂದಿಗೆ 4 ಗ್ರಾಂ 19:19:19 ಗೊಬ್ಬರವನ್ನು ಪ್ರತಿ ಲೀಟರ್ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು

## ಉತ್ತಮ ಗುಣಮಟ್ಟದ ಮಾವು ಉತ್ಪಾದನೆಯ ತಂತ್ರಜ್ಞಾನಗಳು

ಹಣ್ಣುಗಳ ರಾಜ ಎಂದೇ ಕರೆಯಲಾಗುವ ಮಾವು, ಭಾರತದ ಪ್ರಮುಖ ಹಣ್ಣಿನ ಬೆಳೆಯಾಗಿದೆ. ಇದರ ಹಣ್ಣುಗಳು ರುಚಿಕರವಾಗಿದ್ದು, 'ಎ' ಮತ್ತು 'ಸಿ' ಜೀವಸತ್ವವನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿವೆ. ಮಾವಿನ ಹಣ್ಣುಗಳನ್ನು ತಾಜಾ ರೂಪದಲ್ಲಿ ಮತ್ತು ಸಂಸ್ಕರಿಸಿದ ಪದಾರ್ಥದ ರೂಪದಲ್ಲಿ ಉಪಯೋಗಿಸಬಹುದಾಗಿದೆ. ವಿದೇಶಗಳಲ್ಲಿ ಈ ಹಣ್ಣಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಹಣ್ಣು ಹಾಗೂ ಸಂಸ್ಕರಿಸಿದ ಪದಾರ್ಥಗಳನ್ನು ರಫ್ತು ಮಾಡಲಾಗುತ್ತಿದೆ. ಇದರಿಂದ ನಿಗದಿತ ಪ್ರಮಾಣದಲ್ಲಿ ವಿದೇಶಿ ವಿನಿಮಯವನ್ನು ತರುವ ಹಣ್ಣೆಂದು ಇದು ಹೆಸರುವಾಸಿಯಾಗಿದೆ. ಮಾವಿನ ಬೇಸಾಯದಲ್ಲಿ ಇಳುವರಿ ಮತ್ತು ಗುಣಮಟ್ಟದ ಹಣ್ಣನ್ನು ಪಡೆಯಲು ಮಾವಿನ ತೋಟದ ನಿರ್ವಹಣೆ ಮುಖ್ಯವಾಗಿದ್ದು ರೈತರು ಈ ಕೆಳಗಿನ ಕ್ರಮಗಳನ್ನು ಅನುಸರಿಸುವುದು ಸೂಕ್ತ.

- **ನೀರು ನಿರ್ವಹಣೆ :** ಬಿದ್ದ ಮಳೆ ನೀರು ಪೋಲಾಗದಂತೆ, ಗಿಡದ ಸುತ್ತಮುತ್ತಲಿನ ಜಾಗೆಯಲ್ಲಿ ಮಳೆ ನೀರು ಇಂಗಲು, ಗಿಡದ ಸುತ್ತಲೂ ಚೆನ್ನಾಗಿ ಅಗತಿ ಮಾಡಿ ಅಗಲವಾದ ಮಡಿಮಾಡಬೇಕು. ನಂತರ ನೀರು ಹರಿದು ಹೋಗುವ ವಿರುದ್ಧ ದಿಕ್ಕಿನಲ್ಲಿ ಆಳವಾಗಿ ಉಳುಮೆ ಮಾಡಬೇಕು. ನೇಗಿಲು ಉಳುಮೆ ಒಳ್ಳೆಯದು. ಇದರಿಂದ ಗಿಡಗಳ ಸಣ್ಣಬೇರುಗಳು ಹರಿದು ಬೇರು ಉಸಿರಾಟಕ್ಕೆ ಸಹಾಯವಾಗುತ್ತದೆ ಮತ್ತು ನೀರು ಹರಿದು ಹೋಗದಂತೆ ತಡೆಯುತ್ತವೆ. ಇದರಿಂದ ಗಿಡದ ಸುತ್ತ ತೇವಾಂಶ ಹೆಚ್ಚಾಗುತ್ತದೆ. ಮಾವಿನ ತೋಟದಲ್ಲಿ ಕಳೆಯನ್ನು ಆಗಾಗ್ಗೆ ತೆಗೆಯಬೇಕು. ಗಿಡದ ಸುತ್ತಲಿನ ಒಣಗಿದ ಗೊಟ್ಟ ಮತ್ತು ಇತರ ವಸ್ತುಗಳನ್ನು ತೆಗೆದು ಬೇರೆಡೆ ಸಾಗಿಸಬೇಕು. ಭೂಮಿಯಲ್ಲಿ ತೇವಾಂಶ ಕಾಪಾಡಲು ಗಿಡದ ಸುತ್ತಲಿನ ಬುಡಕ್ಕೆ ಒಣಗಿದ ಹುಲ್ಲು ಹಾಗೂ ಇತರ ತ್ಯಾಜ್ಯ ವಸ್ತುಗಳಿಂದ ಹೊದಿಕೆ ಮಾಡಬೇಕು. ಇದರಿಂದ ಗಿಡದ ಸುತ್ತಲಿನ ಜಾಗೆಯಲ್ಲಿ ತೇವಾಂಶ ಆರದಂತೆ ತಡೆಯಬಹುದು.
- ಮಾವಿನಗಿಡಕ್ಕೆ ಪ್ರತಿ ವರ್ಷ ಎರಡುಬಾರಿ ಗೊಬ್ಬರಗಳನ್ನು ಪ್ರತಿ ಗಿಡಕ್ಕೆ ಜೂನ-ಜುಲೈ ಹಾಗೂ ಸೆಪ್ಟೆಂಬರ-ಅಕ್ಟೋಬರ ತಿಂಗಳಲ್ಲಿ ಒದಗಿಸಬೇಕು
  - <u>1ನೇ ವರ್ಷದಿಂದ 9 ವರ್ಷದ ಗಿಡಗಳಿಗೆ :</u> ಪ್ರತಿ ಗಿಡಕ್ಕೆ ಕೊಟ್ಟಿಗೆ ಗೊಬ್ಬರ 25 ಕಿಲೋ, ಸಾರಜನಕ 145 ಗ್ರಾಂ, ಡಿ.ಎ.ಪಿ 40 ಗ್ರಾಂ ಹಾಗೂ ಪೊಟ್ಯಾಷ 110 ಗ್ರಾಂ ಒದಗಿಸಬೇಕು
  - <u>9 ರಿಂದ 10 ವರ್ಷದ ಮೇಲ್ಪಟ್ಟ ಗಿಡಗಳಿಗೆ :</u> 25 ಕಿಲೋ ಕೊಟ್ಟಿಗೆ ಗೊಬ್ಬರ, ಯುರಿಯಾ 1450 ಗ್ರಾಂ, ಡಿ.ಎ.ಪಿ 430 ಗ್ರಾಂ ಹಾಗೂ ಪೋಟ್ಯಾಷ 1160 ಗ್ರಾಂ ಗೊಬ್ಬರಗಳನ್ನು ಒದಗಿಸಬೇಕು.
- ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಬೆಂಗಳೂರಿನಿಂದ ಬಿಡುಗಡೆಯಾದ 'ಮಾವು ಸ್ಪೇಶಲ್' ರಾಸಾಯನ ಮಿಶ್ರಣವನ್ನು ಪ್ರತಿ ಲೀಟರ್ ನೀರಿಗೆ 4 ಗ್ರಾಂ ಬೆರೆಸಿ 6 ಬಾರಿ (ಸಪ್ಟೆಂಬರ್, ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್) ನಲ್ಲಿ ಮತ್ತು ಗೋಲಾಕಾರ ಸೈಜಿನ ಕಾಯಿಹಿಡಿದಾಗ ಮತ್ತು ದೊಡ್ಡಗಾತ್ರದ

ಕಾಯಿ ಆದಾಗ ಸಿಂಪರಣೆ ಮಾಡಬೇಕು. ಇದರಿಂದ ಕಾಯಿಯ ಬಣ್ಣ ಹೆಚ್ಚುತ್ತದೆ ಹಾಗೂ ಬೇಗ ಮಾಗಿಗೆ ಬರುತ್ತವೆ.

- ಮಾವಿನ ಗಿಡದಲ್ಲಿ ಬೇಗ ಮತ್ತು ಒಂದೇ ಸಮಯದಲ್ಲಿ ಹೂಬಿಡಲು ಪ್ರತಿ ಗಿಡಕ್ಕೆ 5 ಮಿ.ಲೀ ಪ್ಯಾಕ್ಲೋಬುಟ್ರಾಜಾಲ್ (ಕಾಲ್ಟಾರ್) ಸಂಯುಕ್ತ ವಸ್ತುವನ್ನು ಹತ್ತು ಲೀಟರ್ ನೀರಿಗೆ ಬೆರಸಿ ಗಿಡದ ಪಾತಿಗಳಿಗೆ ಕಾಂಡದಿಂದ 90 ಸೇ.ಮೀ. (3 ಘೂಟ್) ಅಂತರದಲ್ಲಿ (ಸಾಮಾನ್ಯವಾಗಿ ಆಗಸ್ಟ, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ) ಸುರಿಯುವದರಿಂದ ಗಿಡಗಳು ಪ್ರತಿ ವರ್ಷ ಹೂ ಬಿಡುತ್ತವೆ. ಇದನ್ನು ಗಿಡಕ್ಕೆ ಸುರಿಯುವಾಗ ಹೊಲದಲ್ಲಿ ತೇವಾಂಶವಿರಬೇಕು.
- ಮಾವಿನ ತೋಟದಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಸಿದರೆ ಸೆಪ್ಟೆಂಬರ್ ತಿಂಗಳಿನಿಂದ ಸಣ್ಣಗಾತ್ರದ ಕಾಯಿ ಕಟ್ಟುವವರೆಗೆ ನೀರನ್ನು ಹಾಯಿಸಬಾರದು.
- ಮಾವಿನ ಕಾಯಿಯು ಗಾಜಿನ ಗೋಲಿ ಆಕಾರದಲ್ಲಿದ್ದಾಗ ಗಿಡಗಳಿಗೆ ನೀರನ್ನು ಹಾಯಿಸಬೇಕು. ಇದರಿಂದ ಕಾಯಿಯ ಗಾತ್ರ ಹೆಚ್ಚುತ್ತದೆ.

## *ಮಾವಿನ ಬೆಳೆಗೆ ಬರುವ ಕೀಟಗಳು ಹಾಗೂ ರೋಗಗಳ ನಿರ್ವಹಣೆ*

**ಜಿಗಿ ಹುಳು :** ಈ ಕೀಟವು ಮಾವಿನ ಬೆಳೆಗೆ ಡಿಸೆಂಬರ ಮತ್ತು ಜನವರಿ ತಿಂಗಳಲ್ಲಿ ಕಾಣಿಸಿಕೊಳ್ಳುತ್ತದೆ. ಹುಳದ ಬಾಧೆಯು ಹೂವು ಬಿಡುವ ಸಮಯದಲ್ಲಿ ಹೆಚ್ಚು ಕಾಣಿಸುತ್ತದೆ. ಜಿಗಿಹುಳು ಮೊಗ್ಗು, ಹೂವು ಮತ್ತು ಗೊಂಚಲುಗಳಿಂದ ರಸವನ್ನು ಹೀರುವದರಿಂದ ಎಲೆಗಳ ಮೇಲೆ ಜಿಗಿ ಕಾಣಿಸಿ ನಂತರ ಕಪ್ಪು ಶಿಲೀಂದ್ರ ಬೆಳೆಯುವದರಿಂದ ದ್ಯುತಿಸಂಶ್ಲೇಷಣೆ ಕ್ರಿಯೆ ಕುಂಠಿತವಾಗುತ್ತದೆ. ಇದರಿಂದ ಹೂವುಗಳು, ಮಿಡಿಗಳು ಮತ್ತು ಚಿಕ್ಕ ಕಾಯಿಗಳು ಉದುರುವವು. ಕೀಟದ ಬಾಧೆ ಹೆಚ್ಚಾಗಿದ್ದರೆ, ಬೆಳೆಯ ಇಳುವರಿ ಶೇಕಡಾ 20 ರಿಂದ 50 ರಷ್ಟು ನಷ್ಟವಾಗುತ್ತದೆ. ಈ ಕೀಟದ ಬಾಧೆಯಿಂದ ಬೆಳೆಯನ್ನು ರಕ್ಷಿಸಲು ಮೊಗ್ಗು ಬಿಡುವ ಹಂತದಲ್ಲಿ ತಪ್ಪದೇ ಮಾವಿನ ಬೆಳೆಗೆ ಮೊದಲನೆಯ ಸಿಂಪರಣೆ ಮಾಡಬೇಕು.

**ಹತೋಟಿ ಕ್ರಮಗಳು :**

- ಮೊದಲನೇಯ ಸಿಂಪರಣೆ : 2 ಮಿ.ಲೀ ಡೈಮಿಥೋಯೇಟ ಅಥವಾ 1.5 ಮಿ.ಲೀ ಮೊನೊಕ್ರೊಟೋಫಾಸ್ ಮತ್ತು 2 ಮಿ.ಲೀ ಬೇವಿನ ಎಣ್ಣೆಯನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಮೊಗ್ಗು ಬಿಡುವ ಸಮಯದಲ್ಲಿ ಸಿಂಪರಣೆ ಮಾಡಬೇಕು.
- ಎರಡನೇಯ ಸಿಂಪರಣೆ : 0.3 ಮಿ.ಲೀ ಇಮಿಡಾಕ್ಲೊಪ್ರಿಡ್ ಅಥವಾ 0.3 ಗ್ರಾಂ. ಥೈಯೋಮಿಥಾಕ್ಸಾಮ್ ಪ್ರತಿ ಲೀಟರ ನೀರಿಗೆ ಕೂಡಿಸಿ ಮೊದಲನೇಯ ಸಿಂಪರಣೆಯಾದ 20 ರಿಂದ 25 ದಿನಗಳಾದ ಮೇಲೆ ಸಿಂಪರಣೆ ಮಾಡಬೇಕು.
- ಮೂರನೇಯ ಸಿಂಪರಣೆ : 1 ಮಿ.ಲೀ ಲ್ಯಾಮಡಾ ಶಿಲೋಥ್ರಿನ್ ಅಥವಾ 2 ಮಿ.ಲೀ ಕಾರ್ಬೋಸಲ್ಫಾನ್ ಔಷಧಿಗಳನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಎರಡನೇಯ ಸಿಂಪರಣೆಯಾದ 20 ರಿಂದ 25 ದಿನಗಳಾದ ಮೇಲೆ ಸಿಂಪರಣೆ ಮಾಡಬೇಕು.

**ಬೂದು ರೋಗ :** ಈ ರೋಗವು ಮಾವಿನ ಬೆಳೆಯ ಎಲೆ, ಹೂವು ಮತ್ತು ಸಣ್ಣ ಮಿಡಿಗಳಲ್ಲಿ ಕಾಣಿಸಿಕೊಳ್ಳುತ್ತದೆ. ಎಲೆಗಳ ಮೇಲೆ ರೋಗವು ಕಾಣಿಸಿಕೊಂಡ ನಂತರ ಎಲೆಗಳು ಕಂದು ಬಣ್ಣಕ್ಕೆ ತಿರುಗಿ ಕೆಳಮುಖವಾಗಿ ಮುದುಡುತ್ತವೆ. ಹೂವುಗಳು ಮತ್ತು ಹೂವುಗಳ ದೇಟುಗಳ ಮೇಲೆ ಬಿಳಿ ಬೂದಿ ಬಣ್ಣದ ಶಿಲೀಂದ್ರಗಳು ಬೆಳೆದು ಹೂವುಗಳು ಉದುರುತ್ತವೆ. ನಂತರ ಮಿಡಿಗಳು ಹಳದಿ ಬಣ್ಣಕ್ಕೆ ತಿರುಗಿ ಉದುರುತ್ತವೆ.

**ಹತೋಟಿ ಕ್ರಮಗಳು :**

- ಈ ರೋಗ ಕಾಣಿಸಿಕೊಂಡ ತಕ್ಷಣ 4 ಗ್ರಾಂ ನೀರಿನಲ್ಲಿ ಕರುಗುವ ಗಂಧಕ ಅಥವಾ 1.5 ಮಿ.ಲೀ ಹೆಕ್ಸಾಕೋನಾಜೋಲ್ ಅಥವಾ 1 ಮಿ.ಲೀ ಪ್ರೊಪಿಕೋನಾಜೋಲ್ ಅಥವಾ 1 ಗ್ರಾಂ ಕಾರ್ಬಾಂಡೈಜಿಮ್ ಶಿಲೀಂದ್ರನಾಶಕವನ್ನು ಪ್ರತಿ ಲೀಟರ ನೀರಿಗೆ ಕೂಡಿಸಿ ಸಿಂಪರಣೆ ಮಾಡಿರಿ

# ಈರುಳ್ಳಿಯಲ್ಲಿ ಬೀಜೋತ್ಪಾದನೆ ತಾಂತ್ರಿಕತೆ

**ಈರುಳ್ಳಿಯಲ್ಲಿ ಗಡ್ಡೆಯಿಂದ ಬೀಜ ಉತ್ಪಾದನೆ** ಪದ್ಧತಿಯನ್ನು ರೈತರು ಹೆಚ್ಚಾಗಿ ಅನುಸರಿಸುತ್ತಾರೆ. ಇದರಿಂದ ಒಳ್ಳೆಯ ಗುಣಮಟ್ಟದ ಗಡ್ಡೆಯ ಆಯ್ಕೆ ಮಾಡಲು ಬರುವದು ಮತ್ತು ಒಳ್ಳೆಯ ಗುಣಮಟ್ಟದ ಬೀಜ ಪಡೆಯಲು ಸಾಧ್ಯ ಹಾಗೂ ತಳಿಯ ಅನುವಂಶಿಕತೆ ಕಾಪಾಡಬಹುದು. ಈ ಪದ್ಧತಿಯಲ್ಲಿ ಮುಂಗಾರಿ ಹಂಗಾಮಿನಲ್ಲಿ ಬೀಜ ಬಿತ್ತಿದ ನಂತರ ಅಕ್ಟೋಬರ ತಿಂಗಳಲ್ಲಿ ಗಡ್ಡೆ ಕೊಯ್ಲಿಗೆ ಬರುತ್ತವೆ. ನಂತರ ನವ್ಹಂಬರ ತಿಂಗಳಲ್ಲಿ ಗಡ್ಡೆಗಳನ್ನು ನಾಟಿ ಮಾಡಬೇಕು. ಬೀಜಕ್ಕಾಗಿ ಕಟಾವು ಮಾಡಿದ ಗಡ್ಡೆಯನ್ನು 14 ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶದಲ್ಲಿ ಒಣಗಿಸಬೇಕು. ಗಡ್ಡೆಯ ಗುಣಮಟ್ಟ ಮತ್ತು ಅನುವಂಶಿಕತೆಯನ್ನು ಕಾಪಾಡಲು ಗಡ್ಡೆಗಳ ಆಯ್ಕೆ ಬಹಳ ಮಹತ್ವ ಇರುತ್ತದೆ. ಗಡ್ಡೆಗಳ ಆಯ್ಕೆಯನ್ನು ಎರಡು ಅಥವಾ ಮೂರು ಹಂತದಲ್ಲಿ ಮಾಡಬೇಕು. ಮೊದಲನೇ ಹಂತದಲ್ಲಿ ಪಿಟ್ಟೆಗಡ್ಡೆ, ಕೊಳೆತಗಡ್ಡೆ ಮತ್ತು ಇತರ ತಳಿಗಳ ಗಡ್ಡೆಗಳನ್ನು ತೆಗೆಯಬೇಕು. ಎರಡನೇ ಹಂತದಲ್ಲಿ ಚಪ್ಪಟೆ ಆಕಾರದ ಮತ್ತು ದಪ್ಪವಾದ ಕುತ್ತಿಗೆ ಇರುವ ಗಡ್ಡೆಗಳನ್ನು ತೆಗೆಯಬೇಕು. ನಂತರ ಬೇಕಾದ ಬಣ್ಣದ, ಆಕಾರದ ಮತ್ತು ಗಾತ್ರದ ಗಡ್ಡೆಗಳನ್ನು ಆಯ್ಕೆ ಮಾಡಬೇಕು. ನಾಟಿ ಮಾಡುವ ಸಮಯದಲ್ಲಿ ಗಡ್ಡೆಯ ಮೇಲಿನ ತುದಿಯನ್ನು 1/3 ಭಾಗ ಕತ್ತರಿಸಿ ಎರಡು ಅಥವಾ ಹೆಚ್ಚು ಸುಳಿ ಇರುವ ಗಡ್ಡೆಗಳನ್ನು ರೋಗ ಪೀಡಿತ ಗಡ್ಡೆಗಳಿಂದ ಬೇರ್ಪಡಿಸಬೇಕು. ಕತ್ತರಿಸಿದ ಗಡ್ಡೆಗಳನ್ನು ಕಾರ್ಬಂಡೈಜಿಮ್ (1 ಗ್ರಾಂ/ಲೀಟರ್) ಹಾಗೂ ಮೊನೊಕ್ರೊಟೊಫಾಸ್ (1.5 ಮಿ.ಲೀ/ಲೀಟರ) ದ್ರಾವಣದಲ್ಲಿ ಅದ್ದಿ ತೆಗೆಯಬೇಕು. ನಾಟಿ ಮಾಡುವ ಗಡ್ಡೆಗಳು ಸಾಮಾನ್ಯವಾಗಿ 40 ರಿಂದ 60 ಮೀ.ಮೀ ಸುತ್ತಳತೆ ಮತ್ತು 60-80 ಗ್ರಾಂ ತೂಕ ಹೊಂದಿರಬೇಕು. ಪ್ರತಿ ಎಕರೆಗೆ 10 ರಿಂದ 12 ಕ್ವಿಂಟಲ್ ಗಡ್ಡೆಗಳು ಬೇಕಾಗುತ್ತವೆ.

**ಗೊಬ್ಬರದ ಪ್ರಮಾಣ:** ಪ್ರತಿ ಎಕರೆಗೆ 2 ಟ್ರ್ಯಾಕ್ಟರ್ ಲೋಡ ಕೊಟ್ಟಿಗೆ ಗೊಬ್ಬರ, ಡಿಎಪಿ-40 ಕಿಲೋ ಯೂರಿಯಾ-70 ಕಿಲೋ ಮತ್ತು ಪೊಟ್ಯಾಷ್-30 ಕಿಲೋ ಗೊಬ್ಬರಗಳನ್ನು ಹಾಕಬೇಕು. ಗಡ್ಡೆ ನಾಟಿಮಾಡುವದಕ್ಕಿಂತ ಮುಂಚೆ 20 ಕಿಲೋ ಡಿಎಪಿ, 35 ಕಿಲೋ ಯೂರಿಯಾ, 15 ಕಿಲೋ ಪೊಟ್ಯಾಷ ಹಾಕಬೇಕು. ಗಡ್ಡೆ ನಾಟಿಮಾಡಿದ 30 ದಿನಗಳ ನಂತರ 10 ಕಿಲೋ ಡಿಎಪಿ, 12 ಕಿಲೋ ಯೂರಿಯಾ ಮತ್ತು 8 ಕಿಲೋ ಪೊಟ್ಯಾಷ ಹಾಕಬೇಕು. ಗಡ್ಡೆ ನಾಟಿಮಾಡಿದ 45 ದಿನಗಳ ನಂತರ ಇದೇ ಪ್ರಮಾಣದ ಗೊಬ್ಬರವನ್ನು ಹಾಕಬೇಕು. ಗಡ್ಡೆ ನಾಟಿಮಾಡಿದ 30 ಹಾಗೂ 60 ದಿನಗಳ ನಂತರ ಪ್ರತಿ ಲೀಟರ್ ನೀರಿಗೆ 10 ಗ್ರಾಂ 19:19:19 ನ್ನು ಸಿಂಪರಣೆ ಮಾಡಬೇಕು ಹಾಗೂ 60 ದಿನಗಳ ನಂತರ 0:0:50 ಮಲ್ಟಿಕೆಯನ್ನು ಪ್ರತಿ ಲೀಟರ್ ನೀರಿಗೆ 10 ಗ್ರಾಂ ಹಾಕಿ ಸಿಂಪರಣೆ ಮಾಡಬೇಕು.

**ರೋಗಿಂಗ್:** ಹಳದಿ ಹಾಗೂ ಅಶಕ್ತ ಸಸಿಗಳನ್ನು ಹೂ ಬಿಡುವದಕ್ಕಿಂತ ಮುಂಚೆ ಕಿತ್ತು ಹಾಕಬೇಕು.
**ಕಳೆ ನಿಯಂತ್ರಣ:** ಈರುಳ್ಳಿ ಬೀಜೋತ್ಪಾದನೆಯಲ್ಲಿ ಕಳೆನಿಯಂತ್ರಣ ಮಾಡಲು ಗಡ್ಡೆ ನಾಟಿ ಮಾಡಿದ 45-60 ದಿನಗಳ ಅಂತರದಲ್ಲಿ ಪ್ರತಿ ಲೀಟರ್ ನೀರಿಗೆ 1.5 ಮಿ.ಲೀ ಅಕ್ಸಿಪ್ಲೇರೋನ್‌ನ್ನು ಸಿಂಪರಣೆ ಮಾಡಬೇಕು.

**ನಾಟಿಮಾಡುವ ಕಾಲ ಮತ್ತು ನಾಟಿ ಮಾಡುವದು:** ನವೆಂಬರ ತಿಂಗಳು ನಾಟಿ ಮಾಡಲು ಒಳ್ಳೆಯ ಸಮಯ. ತಳಿಯ ಶುದ್ಧತೆಯನ್ನು ಕಾಪಾಡಲು ಬೀಜೋತ್ಪಾದನೆ ಹೊಲದ 500 ಮೀಟರ್ ಸುತ್ತ ಯಾವುದೇ ಈರುಳ್ಳಿ ತಳಿಯ ಬೀಜೋತ್ಪಾದನೆ ತಾಕು ಇರಬಾರದು. ಒಂದೂವರೆ ಫೂಟ್ ಅಂತರದಲ್ಲಿ ಬೋದುಗಳನ್ನು ಮಾಡಿ ಗಡ್ಡೆಗಳನ್ನು ಒಂದು ಫೂಟು ಅಂತರದಲ್ಲಿ ಹಾಗೂ 2-3 ಇಂಚು ಆಳದಲ್ಲಿ ನಾಟಿ ಮಾಡಬೇಕು.

## *ಬೀಜೋತ್ಪಾದನೆ ಈರುಳ್ಳಿ ಬೆಳೆಯ ಕೀಟ ಮತ್ತು ರೋಗ ನಿರ್ವಹಣೆ*

**1) ಥ್ರಿಪ್ಸ ಕೀಟ ನಿರ್ವಹಣೆ:** ಈ ಕೀಟವು ಎರಡು ಎಲೆಗಳ ಮಧ್ಯಭಾಗದಲ್ಲಿ ಹೆಚ್ಚಾಗಿ ಕಂಡು ಬರುತ್ತವೆ, ಎಲೆಗಳಿಂದ ರಸಹೀರಿ ಎಲೆಗಳು ಬಾಗುವಂತೆ ಮಾಡುವವು.

**ನಿರ್ವಹಣೆ:** ಕೀಟಗಳು ಕಂಡ ತಕ್ಷಣ 2 ಮಿ.ಲೀ ಡೈಮಿಥೋಯೇಟ್ ಅಥವಾ 0.3 ಗ್ರಾಂ ಥೈಯೋಮಿಥಾಕ್ಷನ್ ಅಥವಾ 1 ಮಿ.ಲೀ ಲ್ಯಾಮಡಾ ಶಿಲೋಥ್ರಿನ್ ಔಷಧಿ ಪ್ರತಿ ಲೀಟರ್ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.

**2) ಮಜ್ಜಿಗೆ ರೋಗ:** ಎಲೆಗಳ ಮೇಲೆ ಮೊದಲು ಬಿಳಿಕಲೆಗಳು ಕಂಡು ನಂತರ ಮಚ್ಚೆಗಳಾಗಿ ಪರಿವರ್ತನೆಯಾಗಿ ಎಲೆಗಳು ಮಡಿಚಿ ಬಾಗುತ್ತವೆ. ಅಲ್ಲದೇ ರೋಗ ತೀವ್ರವಾಗಿದ್ದರೆ ಎಲೆ ತುದಿಯಿಂದ ಗಡ್ಡೆಯವರೆಗೂ ಒಣಗುತ್ತದೆ. ಇದರಿಂದ ಹೂವು ಗೊಂಚಲುಗಳ ಸಂಖ್ಯೆ ಕಡಿಮೆಯಾಗಿ ಬೀಜದ ಇಳುವರಿ ಕಡಿಮೆಯಾಗುತ್ತದೆ.

**ನಿರ್ವಹಣೆ:**

- ಯೂರಿಯಾ ಗೊಬ್ಬರ ಬಳಕೆ ಕಡಿಮೆ ಮಾಡಬೇಕು ಮತ್ತು ಗರಿಗಳು ಜಾಸ್ತಿಯಿದ್ದಾಗ ಯೂರಿಯಾ ಉಗ್ಗಬಾರದು,
- ಈ ರೋಗವನ್ನು ಗುರುತಿಸಿದ ತಕ್ಷಣ 1.5 ಮಿ.ಲೀ ಹೆಕ್ಸಾಕೋನಾಜೋಲ್ ಅಥವಾ 1 ಮಿ.ಲೀ ಪ್ರೊಪಿಕೊನಾಜೋಲ್ ಅಥವಾ 1 ಗ್ರಾಂ ಕಾರ್ಬಂಡೆಜಿಮ್ ಔಷಧಿಯನ್ನು ಪ್ರತಿ ಲೀಟರ್ ನೀರಿಗೆ ಕೂಡಿಸಿ ಸಿಂಪರಣೆ ಮಾಡಬೇಕು.
- ಕೀಟಕ್ಕೆ ಮತ್ತು ಮಜ್ಜಿಗೆ ರೋಗಗಳಿಗೆ ಸಿಂಪರಣೆ ಮಾಡುವ ಸಮಯದಲ್ಲಿ 2 ಗ್ರಾಂ 19:19:19 ಗೊಬ್ಬರ ಮತ್ತು 2 ಗ್ರಾಂ 13:0:45 ಗೊಬ್ಬರಗಳನ್ನು ಸೇರಿಸಿ ಸಿಂಪರಣೆ ಮಾಡಬೇಕು.

**ಮೊಬೈಲ್ ಮೂಲಕ ಕೃಷಿ ಸಂದೇಶಗಳನ್ನು ಪಡೆಯಲು ನೋಂದಣಿಗಾಗಿ ದೂರವಾಣಿ ಸಂಖ್ಯೆ: 08372-289606 ಕರೆ ಮಾಡಿ**

**ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕರು ಹಾಗೂ ಪ್ರಕಾಶಕರು: ಡಾ॥ ಎಲ್.ಜಿ.ಹಿರೇಗೌಡರ, ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು

ಸಂಪಾದಕರು: ಡಾ॥ ಸುಧಾ ರಾಯನಗೌಡರ, ವಿಜ್ಞಾನಿಗಳು (ಗೃಹ ವಿಜ್ಞಾನ)

ಸಹ ಸಂಪಾದಕರು: ಶ್ರೀ ವ್ಹಿ.ಡಿ.ವೈಕುಂಠೆ, ವಿಜ್ಞಾನಿಗಳು (ಬೇಸಾಯ ಶಾಸ್ತ್ರ), ಶ್ರೀ ಎಸ್.ಕೆ.ಮುದ್ಲಾಪೂರ, ವಿಜ್ಞಾನಿಗಳು (ಸಸ್ಯ ಸಂರಕ್ಷಣೆ),
ಶ್ರೀ ಕೆ.ಟಿ.ಪಾಟೀಲ ವಿಜ್ಞಾನಿಗಳು (ತೋಟಗಾರಿಕೆ), ಶ್ರೀ ಎನ್.ಎಚ್.ಭಂಡಿ ವಿಜ್ಞಾನಿಗಳು (ಮಣ್ಣು ವಿಜ್ಞಾನ),
ಶ್ರೀ ಎಸ್.ಎಚ್. ಆದಾಪೂರ, ವಿಜ್ಞಾನಿಗಳು (ಕೃಷಿ ವಿಸ್ತರಣೆ),
ಡಾ॥ ಬಿ.ಎಮ್.ಮುರಗೋಡ ಕಾರ್ಯಕ್ರಮ ಸಹಾಯಕರು (ಪಶು ಸಂಗೋಪನೆ),
ಶ್ರೀ ಸುರೇಶ ಹಳೇಮನಿ, ಫಾರ್ಮ ಮ್ಯಾನೇಜರ

ವಿನ್ಯಾಸ ಹಾಗೂ ಅಕ್ಷರ ಜೋಡಣೆ: ಶ್ರೀಮತಿ ಲಲಿತಾ ಅಸೂಟಿ, ಕಾರ್ಯಕ್ರಮ ಸಹಾಯಕರು (ಗಣಕ ಯಂತ್ರ)

ಸಹಾಯ : ಶ್ರೀ ಎಮ್.ಬಿ.ಜಕ್ಕನಗೌಡರ, ಕಚೇರಿ ಅಧೀಕ್ಷಕರು

ಮುದ್ರಕರು ಹಾಗೂ ಪ್ರಕಾಶಕರು: ಡಾ॥ ಎಲ್.ಜಿ.ಹಿರೇಗೌಡರ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ-582205, ಗದಗ ಜಿಲ್ಲೆ, ಕರ್ನಾಟಕ ರಾಜ್ಯ

ಫೋನ್: (08372)289606, ಇ-ಅಂಚೆ:kvkhulkoti@gmail.com, ಅಂತರ್‌ಜಾಲ: www.khpkvk.org